Total amount spent Rs.3661.91 lakhs. (the excess amount spent out of recoveries and out of unspent balance of previous years).

b) Self-employment programme, Land Owning Scheme, Individual Irrigation Borewell programme, Rehabilitation of Devadasis programme, Rehabilitation of Atrocity victims, Skill Development programme, Rehabilitation of Sweepers and Scavengers, Energisation of Borewells in Sch.Castes lands, Enterprenuership Development programme. Lift Irrigation, Dry land Development programme.

c) The Board of Directors and the Managing Director of the Corporation have full powers and control over the activities of corporation.

ಉಡುಪಿ ಪುರಸಭೆಯ ಕುಡಿಯುವ ನೀರಿನ ಯೋಜನೆಯ ಮಂಜೂರಾತಿ ಕುರಿತು

1662: ಶ್ರೀ ಎ. ರುಕ್ಮಯ್ಯ ಪೂಜಾರಿ (ಏಟ್ಪ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಉಡುಪಿ ಪುರಸಭೆಯ ಪರಿಸರದ ಹಿರಿಯಡ್ಕ ಹೆಗ್ಗಾರ, ಶಿವಳ್ಳಿ, ಬೈಲಚಾರು ಮತ್ತು ಮಲ್ಪೆ ಹಾರ್ಬರ್, ಪ್ರಾಜೆಕ್ಟ್ ಇವುಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ; ಇಹರ ವೆಚ್ಚವನ್ನು ಯಾರು ಭರಿಸುತ್ತಾರೆ;

ಆ. ಇನ್ನು ಮುಂದೆ ಕೂಡ ಕುಡಿಯುವ ನೀರಿನ ಕೊರತೆ ಉಂಟಾಗದಂತೆ ಕ.ನ.ನೀ.ಸ.ಒ.ಚ. ಮಂಡಲಿ ಇವರು ನಿರ್ವಾಹಕ ನಿರ್ದೇಶಕರುರವರು ಸದರಿ ಯೋಜನೆಗೆ ಹೆಚ್ಚುವರಿಯಾಗಿ 2ಎಂ.ಜಿ.ಡಿ. ನೀರು ಸರಬರಾಜು ಬಗ್ಗೆ ಅಂದಾಜು ಪಟ್ಟಿ ತಯಾರಿಸಿ ಮಂಜೂರಾತಿಗಾಗಿ ನಗರಾಭಿವೃದ್ಧಿ ಕಾರ್ಯದರ್ಶಿಯವರಿಗೆ ಕಳುಹಿಸಿದೆಯೇ;

ಇ. ಮಂಜೂರಾತಿಯಾಗಿದೆಯೇ; ಆಗದೇ ಇದ್ದರೆ ಯಾಕೆ, ಯಾವಾಗ ಮಂಜೂರಾತಿ ನೀಡುವಿರಿ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. ಹೌದು.

ಉಡುಪಿ ಪುರಸಭೆಯು ನಿರ್ವಹಣೆ ವೆಚ್ಚವನ್ನು ಭರಿಸುತ್ತದೆ.

ಆ. ರೂ.395 ಲಕ್ಷಗಳ ಮೊತ್ತಕ್ಕೆ ತಯಾರಿಸಿದ ಅಂದಾಜು ಪಟ್ಟಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ. ಇಲ್ಲ.

ನಕ್ಷೆ ಮತ್ತು ಅಂದಾಜು ಪಟ್ಟಿಯು ಆಡಳಿತಾತ್ಮಕ ಅನುಮೋದನೆಯ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.